# ಪ್ರಸಂಗದ ಟಿಪ್ಪಣಿ: “ಆಗ ನೀನು ಎಲ್ಲಿದ್ದೆ?”

ಹಳೆಯ ಒಂದು ಆತ್ಮೀಕ ಗೀತೆಯು ಮುಂದಿನ ಪ್ರಶ್ನೆಯನ್ನು ಕೇಳುತ್ತದೆ: “ಆತನನ್ನು ಮರಕ್ಕೆ ನೇತು ಹಾಕಿದಾಗ ಆ ಸ್ಥಳದಲ್ಲಿ ನಿನ್ನ ಇರುವಿಕೆ ಇತ್ತೋ?”; “ಸೂರ್ಯನು ಪ್ರಕಾಶ ನೀಡಲು ನಿರಾಕರಿಸಿದಾಗ, ನೀನು ಎಲ್ಲಿದ್ದೆ?”; “ಈ ಹಾಡಿನ ಪದಗಳು ನನ್ನನ್ನು ಅನೇಕ ಸಾರಿ ನಡುಗುವಂತೆ ಮಾಡಿರುತ್ತದೆ.”[1]

ಈ ಹಾಡಿಗೆ ನಮ್ಮ ಪ್ರಸ್ತುತ ಉತ್ತರ “ಎಂಥಹ ಅವಮಾನ! ನಾನು ಜನಿಸುವ ಮೊದಲೇ, ಅಂದರೆ ಒಂದು ಸಾವಿರದ ಒಂಬೈನೂರು ವರ್ಷಗಳ ಹಿಂದೆ ಯೇಸು ಮರಣ ಹೊಂದಿದ್ದನು. ಹೀಗಿರುವಾಗ, ನಾನು ಆ ಸ್ಥಳದಲ್ಲಿ ಇರಲು ಹೇಗೆ ಸಾಧ್ಯ?” ಹೇಗೂ ಅನೇಕ ವರ್ಷಗಳ ಹಿಂದೆ ಆ ಮರಣಕ್ಕೆ ಸಾಕ್ಷಿಯಾದವರಿಂದ ನಮಗೆ ಉತ್ತರವು ದೊರಕುತ್ತದೆ. ಗೊಲ್ಗಥದ ಬಳಿಯಲ್ಲಿ ನಿಂತವರ ಜೀವಿತಕ್ಕೆ ನಮ್ಮನ್ನು ಹೋಲಿಸುವದಾದರೆ, “ನಾವು ಅನೇಕ ಸಾರಿ ನಡುಗುತ್ತೇವೆ.”

ಅಲ್ಲಿದ್ದವರ ಕುರಿತು ಮುಂದೆ ತಿಳಿಸಲಾಗಿದೆ. ಅವರೊಟ್ಟಿಗೆ ನೀವುಗಳು ಇರುವದನ್ನು ಗ್ರಹಿಸಬಹುದೇ? “ನನ್ನ ಕರ್ತನನ್ನು ಶಿಲುಬೆಗೆ ಹಾಕಿದಾಗ ನಿನ್ನ ಇರುವಿಕೆ ಅಲ್ಲಿ ಪ್ರಸ್ತುತವಾಗಿತ್ತೇ?”

**ಭಿನ್ನಭಿಪ್ರಾಯ ಹೊಂದಿದ್ದ ಸಿಪಾಯಿಗಳು**[2]

ಪೇತ್ರನು ಅವರನ್ನು “ಅನ್ಯಜನರು” (ಅಪೊಸ್ತಲರ ಕೃತ್ಯಗಳು 2:23). ಅವರು ಪರಿಣಿತರು, ಮರಣ ಹಾಗೂ ವೇದನೆಯ ಕುರಿತು ಕಠಿಣ ಹೃದಯಿಗಳಾಗಿದ್ದು, ತಮಗೆ ನೇಮಕವಾದ ಕಾರ್ಯವನ್ನು ಈಡೇರಿಸುವವರೂ ಆಗಿದ್ದರೂ ಆವರು ಕ್ರಿಸ್ತನನ್ನು ಶಿಲುಬೆಗೆ ಏರಿಸಿದಾಗ, ಯಾವುದೇ ವಿಧವಾದ ಅನುಕಂಪವು ಅವರಲ್ಲಿರಲಿಲ್ಲ. ಈ ದಿನಗಳಲ್ಲೂ ಸಹ ಅನೇಕರು, ಯೇಸುವಿನ ಹಾಗೂ ಆತನ ಯಜ್ಞದ ಕುರಿತು ಭಿನ್ನಾಭಿಪ್ರಾಯ ಹೊಂದಿದ್ದಾರೆ.

**ಪೂಜ್ಯಭಾವವಿಲ್ಲದ ಜನರು**

**(ಯೆಹೂದ್ಯ ಅಧಿಕಾರಿಗಳ ಪ್ರೇರಣೆ ಹೊಂದಿದವರು)**

ಕೆಲವರು ದ್ವೇಷದಿಂದ, ಇನ್ನೂ ಕೆಲವರು ಏನೂ ಅರಿಯದವರಾಗಿ ಯೇಸುವನ್ನು ದ್ವೇಷಿಸಿದರು. ಪಾಪರಹಿತನಾದ ದೇವರ ಮಗನಿಗೆ ಈ ರೀತಿಯಾಗಿ ಅವಮಾನ ಮಾಡಿದರು. ಈಗಿನ ಕಾಲದಲ್ಲೂ ಸಹ ಜನರು ಇದೇ ರೀತಿಯಾಗಿ ಅವಮಾನ ಮಾಡಿದರು. ಈಗಿನ ಕಾಲದಲ್ಲೂ ಸಹ ಜನರು ಇದೇ ರೀತಿಯಾಗಿ ದ್ವೇಷಮಾಡುವವರಾಗಿದ್ದಾರೆ.

**ಮಾನಸಾಂತರ ಪಟ್ಟ ಹಾಗೂ ಮಾನಸಾಂತರ ಪಡದ ಕಳ್ಳರು**

(ಮಾನಸಾಂತರ ಪಡದ ಕಳ್ಳನ ಹಾಗೆ) ಕೆಲವರು ತಾವು ಸಂಕಷ್ಟದಲ್ಲಿರುವಾಗಲೂ ಕ್ರಿಸ್ತನ ಶಿಲುಬೆಯ ಸ್ಪರ್ಷವನ್ನು ಅರಿಯರು, ಅಂತಹ ಸಮಯದಲ್ಲಿ ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವವರಿಗಾಗಿ ದೇವರಿಗೆ ಸ್ತೋತ್ರ (ಮಾನಸಾಂತರ ಪಟ್ಟ ಕಳ್ಳನ ಹಾಗೆ).

**ಗೋಳಾಡುವವರು**

ಶಿಲುಬೆಯನ್ನು ನೋಡಿದವರು ಗೋಳಾಡುವವರಾಗಿರುವರು.

**ಅವಿದ್ಯಾವಂತರಾದ ಜನರು**

ಯೇಸು “ಏಲೀ,” ಎಂದು ಹೇಳಿದಾಗ, ಆತನು “ಎಲಿಯಾ” ಎಂದು ಕರೆಯುತ್ತಾನೆ.

ಏಲಿಯು ಬಂದು ರಕ್ಷಿಸುವನೋ ಎಂದು ಕಾದು ಕುಳಿತರು. ದೈವಶಾಸ್ತ್ರ ಕುರಿತು ಗೊಂದಲಕ್ಕೊಳಗಾದವರು, ಆಚರಣೆಯಲ್ಲೂ ಗೊಂದಲಕ್ಕೊಳಗಾಗುವರು.

**ಪ್ರಭಾವ ಬೀರಬಹುದಾದ ಪ್ರೇಕ್ಷಕರು**

ಯೇಸುವಿನ ಮರಣದ ಸಂದರ್ಭದಲ್ಲಿ ಉಂಟಾದ ಭೂಕಂಪನದ ನಿಮಿತ್ತ ಶತಾಧಿಪತಿ ಹಾಗೂ ಸಿಪಾಯಿಗಳು ಪ್ರಭಾವಕ್ಕೊಳಗಾದರು. ಕೆಲವರು ಎದೆ ಬಡಕೊಂಡರು. ಶಿಲುಬೆಯನ್ನು ನೋಡಿಯೂ, ನೀವುಗಳು ಸುಮ್ಮನಿರಲು ಸಾಧ್ಯವೇ?

ಯೇಸು ಗೊಲ್ಗಥಕ್ಕೆ ಬಂದಾಗ
ಅವರು ಆತನನ್ನು ಶಿಲುಬೆಗೆ ಹಾಕಿದರು
ಕಲ್ವಾರಿಯಲ್ಲಿ ಆತನ ಕಾಲು, ಕೈಗಳಿಗೆ
ಮೊಳೆಯಿಂದ ಜಡಿದರು.
ಮುಳ್ಳಿನ ಕಿರೀಟವನ್ನಿಟ್ಟರು
ಆತನ ಗಾಯಗಳು ಕಡು ಕೆಂಪಾಗಿದ್ದವು
ಕಠಿಣ ಹಾಗೂ ಕ್ರೂರ ದಿನದಲ್ಲಿ
ಮಾನವನ ದೇಹ ಬೆಲೆ ಕಳೆದುಕೊಂಡಿತ್ತು.

ಯೇಸು ನಮ್ಮ ಪಟ್ಟಣಕ್ಕೆ ಬಂದಾಗ
ಅವರು ಓರೆಯಾದರು
ಅವರು ಆತನ ಕೂದಲೆಳೆಗೂ
ತೊಂದರೆ ನೀಡದೆ ಇದ್ದರೂ
ಆತನನ್ನು ಸಾಯಲು ಬಿಟ್ಟರು.
ಅವರು ಮೃದು ಸ್ವಭಾವದವರಾಗಿದ್ದರು.
ಆತನಿಗೆ ಯಾವ ನೋವನ್ನು ನೀಡದಿದ್ದರು
ಅವರು ಆತನನ್ನು ಮಳೆಯಲ್ಲೆ ಬಿಟ್ಟರು.

ಅದಾಗ್ಯೂ, ಯೇಸು "ತಂದೆಯೇ ಅವರನ್ನು ಕ್ಷಮಿಸು
ಅವರು ಏನು ಮಾಡುತ್ತಾರೆಂದು ಅರಿಯರು."
ಅದಾಗ್ಯೂ ಆತನು ಚಳಿಗಾಲದ ಮಳೆಯ
ನೀರಿನಿಂದ ಒದ್ದೆಯಾದನು.
ಜನರು ಮನೆಗೆ ಹಿಂದಿರುಗುವಾಗ ಆತನನ್ನು
ನೋಡಲು ಒಂದು ಆತ್ಮವಾದರೂ ಬೀದಿಯಲ್ಲಿರಲಿಲ್ಲ.
ಯೇಸು ಗೋಡೆಗೆ ಒರಗಿದವನಾಗಿ
ಕಲ್ವಾರಿಗಾಗಿ ಅತ್ತನು.

G. A. Studdert-Kennedy[3]

---

ಟಿಪ್ಪಣಿಗಳು

[1]Barton's *Old Plantation Hymns*, 1899; quoted in Praise for the Lord, ed. John P. Wiegand (Nashville: Praise Press, 1997). [2]ನಿಮಗೆ ಕೆಲವು ವರ್ಗಗಳ ಶಬ್ದಗಳ ಚಿತ್ರಗಳು ತೋರಿಸಬೇಕಾಗಬಹುದು: ರೋಮಾ ಸಿಪಾಯಿಗಳು ಅವರ ಬಣ್ಣ ಬಣ್ಣದ ಸಮವಸ್ತ್ರದಲ್ಲಿರುವ ಚಿತ್ರ, ಯೆಹೂದ್ಯನಾಯಕರು ಆಕರ್ಷಿಸುವ ನಿಲುವಂಗಿಯ ಚಿತ್ರ. [3]Quoted in Mack Lyon, Program Transcripts from *In Search of the Lord's Way* (October 1999), 18–19.